ಅಮರ್ಜಾ ಎಡ ಮತ್ತು ಬಲದಂಡೆ ಕಾಲುವೆಯ ಕಾಮಗಾರಿಗಳನ್ನು ಪೂರ್ಣಗೊಳಿಸುವುದರ ಬಗ್ಗೆ

4229 (4837) : ಶ್ರೀ ಗುತ್ತೇದಾರ್ ಸುಭಾಶ್ ರುಕ್ಕಯ್ಯ (ಆಳಂದ) ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಮರ್ಜಾ ಎಡ ಮತ್ತು ಬಲದಂಡೆ ಕಾಲುವೆಯ ಕಾಮಗಾರಿಯು ಅರ್ಧಕ್ಕೆ ನಿಂತಿರುವುದು ನಿಜವೇ? ಹಾಗಿದ್ದಲ್ಲಿ ಅದನ್ನು ಯಾವಾಗ ಮುಗಿಸಲಾಗುವುದು?

ಆ) ಅಮರ್ಜಾ ಎಡ ಮತ್ತು ಬಲದಂಡೆ ವ್ಯಾಪ್ತಿಯಲ್ಲಿ ಬರುವ ರೈತರಿಗೆ ಯಾವಾಗ ನೀರು ಸರಬರಾಜು ಮಾಡಲಾಗುವುದು?

ಇ) ಅಮರ್ಜಾ ಗುತ್ತಿಗೆದಾರರ ಬಾಕಿ ಉಳಿದಿರುವ ಬಿಲ್ಲು ಯಾವಾಗ ಸಂದಾಯ ಮಾಡಲಾಗುವುದು?

ಶ್ರೀ ಹೆಚ್. ಕೆ. ಪಾಟೀಲ್ (ಜಲಸಂಪನ್ಮೂಲ ಸಚಿವರು)

ಅ) ಅಮರ್ಜಾ ಯೋಜನೆಯ ಬಲದಂಡೆ ಕಾಲುವೆಯು ಒಟ್ಟು 45 ಕಿ.ಮೀ ಉದ್ದವಿರುತ್ತದೆ. ಕಾಮಗಾರಿಯ ಇತ್ತೀಚಿನ ಹಂತ ಈ ಕೆಳಗಿನಂತಿದೆ.

ಬಲದಂಡೆ ಕಾಲುವೆ ಒಟ್ಟು ಉದ್ದ 45 ಕಿ.ಮೀ:

1) ಕಿ.ಮೀ 0.00 ಯಿಂದ ಕಿ.ಮೀ 12.00 ವರೆಗೆ ಕಾಮಗಾರಿಗಳು ಪೂರ್ಣಗೊಂಡಿವೆ.

2) ಕಿ.ಮೀ. 12.00 ಯಿಂದ ಕಿ.ಮೀ. 45.00 ವರೆಗೆ (ರೈಲ್ವೇ ಕ್ರಾಸಿಂಗ್ ನಿರ್ಮಾಣ ಹೊರತುಪಡಿಸಿ) ಪ್ರಗತಿಯಲ್ಲಿವೆ. ರೈಲ್ವೇ ಕ್ರಾಸಿಂಗ್ ನಿರ್ಮಾಣಕ್ಕಾಗಿ ಬೇಕಾಗಿರುವ ಹಣವನ್ನು ರೈಲ್ವೇ ಇಲಾಖೆಗೆ ನೀಡಲಾಗಿದ್ದು ಅವರಿಂದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕಾಗಿದೆ.

ಎಡದಂಡೆ ಕಾಲುವೆ ಒಟ್ಟು ಉದ್ದ 55 ಕಿ.ಮೀ :

1) ಕಿ.ಮೀ. 0.00 ಯಿಂದ 18.00 ವರೆಗೆ ಕಾಮಗಾರಿಗಳು ಪೂರ್ಣಗೊಂಡಿವೆ.

2) ಕಿ.ಮೀ. 18.00 ರಿಂದ 55.00 ವರೆಗೆ ಕೆಲಸಗಳು ಪ್ರಗತಿಯಲ್ಲಿವೆ (ರೈಲ್ವೇ ಕ್ರಾಸಿಂಗ್ ನಿರ್ಮಾಣದ ಕಾಮಗಾರಿ ಹೊರತುಪಡಿಸಿ) ರೈಲ್ವೇ ಕ್ರಾಸಿಂಗ್ ನಿರ್ಮಾಣಕ್ಕಾಗಿ ಬೇಕಾಗಿರುವ ಹಣವನ್ನು ರೈಲ್ವೇ ಇಲಾಖೆಗೆ ನೀಡಲಾಗಿದ್ದು ಅವರಿಂದ ಕಾಮಗಾರಿಯನ್ನು ಕೈಗೆತ್ತಿಕೊಳ್ಳಬೇಕಾಗಿದೆ.

2003-04ನೇ ಸಾಲಿನಲ್ಲಿ ಅವಶ್ಯಕವಿರುವ ಹಣಕಾಸನ್ನು ಒದಗಿಸಿಕೊಂಡು ಈ ಯೋಜನೆಯನ್ನು ಪೂರ್ಣಗೊಳಿಸಲಾಗುವುದು.

ಆ) ಈ ಪ್ರಸಕ್ತ ಸಾಲಿನಲ್ಲಿ ಎಡ ಮತ್ತು ಬಲದಂಡೆ ಕಾಲುವೆಯಲ್ಲಿ ಪ್ರಾರಂಭಿಕ 10 ಕಿ.ಮೀ ವರೆಗೆ ನೀರನ್ನು ಹರಿಸಲು ಯೋಜಿಸಿದ್ದು. 2800 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು.

ಬಾಕಿ 7739 ಹೆಕ್ಟೇರ್ ಪ್ರದೇಶದ ನೀರಾವರಿಯನ್ನು ವಿತರಣಾ ಕಾಲುವೆ ಹಾಗೂ ಹೊಲಗಾಲುವೆಗಳನ್ನು ಪೂರ್ಣಗೊಳಿಸಿ 2003-04 ನೇ ಸಾಲಿನಲ್ಲಿ ಕಲ್ಪಿಸಲಾಗುವುದು.

ಇ) ಗುತ್ತಿಗೆದಾರರು ನಿರ್ವಹಿಸಿರುವ ಕಾಮಗಾರಿಗಳನ್ನು ಇಲಾಖೆಯ ವಿಚಕ್ಷಣಾ ದಳವು ಪರಿಶೀಲಿಸಿ ನೀಡಿರುವ ವರದಿಯನ್ನು ಆಧರಿಸಿ ಬಿಲ್ಲು ಪಾವತಿಯನ್ನು ತಡೆಹಿಡಿದಿದ್ದು, ಪರಿಶೀಲಿಸಿ ಆದ್ಯತೆ ಮೇಲೆ ಸಂದಾಯ ಮಾಡಲಾಗುವುದು.

ಜಲಾನಯನ ಇಲಾಖೆಯ ಅವಶ್ಯಕತೆಯ ಬಗ್ಗೆ

4230 (4845) : ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜಲಾನಯನ ಇಲಾಖೆಯ ಅವಶ್ಯಕತೆ ಇದೆಯೆಂದು ಸರ್ಕಾರ ಭಾವಿಸಿದೆಯೆ?

ಆ) ಹಾಗಾದರೆ ಈ ಇಲಾಖೆ ಕಳೆದ 2 ವರ್ಷಗಳಲ್ಲಿ ಯಾವ ಯಾವ ಉದ್ದೇಶಗಳಿಗೆ ಎಷ್ಟು ಹಣ ನೀಡಲಾಗಿದೆ (ವರ್ಷವಾರು ವಿವರ ನೀಡುವುದು)

ಇ) ತಾಲ್ಲೂಕು ಮಟ್ಟದಲ್ಲಿ ಜಲಾನಯನ ಇಲಾಖೆಗೆ ಎಷ್ಟು ಅಧಿಕಾರಿಗಳನ್ನು ಮತ್ತು ನೌಕರರನ್ನು ಒದಗಿಸಲಾಗಿದೆ. (ವೃಂದವಾರು ವಿವರ ನೀಡುವುದು) ತಾಲ್ಲೂಕು ಮಟ್ಟದ ಇಲಾಖೆಯ ಮುಖ್ಯಸ್ಥರು ಯಾರು? ಅಧಿಕಾರಿ ಮತ್ತು ನೌಕರರ ಕೆಲಸ ಕಾರ್ಯಗಳೇನು? ಅವರ ಕೇಂದ್ರಸ್ಥಾನ ಯಾವುದು? ನೌಕರರಿಗೆ ಸಾಕಷ್ಟು ಕೆಲಸಗಳಿವೆಯೆ?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಹೌದು.

ಆ) ಕಳೆದೆರಡು ವರ್ಷಗಳ ಅವಧಿಯಲ್ಲಿ ನೀಡಲಾಗಿರುವ ಹಣದ ವಿವರಗಳನ್ನು ಅನುಬಂಧ–1 ರಲ್ಲಿ ನೀಡಲಾಗಿದೆ.

ಇ) ಜಲಾನಯನ ಇಲಾಖೆಗೆ ತಾಲ್ಲೂಕು ಮಟ್ಟದಲ್ಲಿ ಒಟ್ಟು 13 ಸಿಬ್ಬಂದಿಯನ್ನು ಒದಗಿಸಲಾಗಿದ್ದು ಇದರ ವೃಂದವಾರು ವಿವರಗಳು ಹೀಗಿವೆ.

	ವೃಂದ	ಹುದ್ದೆಗಳ ಸಂಖ್ಯೆ
1.	ಕೃಷಿ ಅಧಿಕಾರಿ	1
2.	ಸಹಾಯಕ ಕೃಷಿ ಅಧಿಕಾರಿ	1
3.	ಕೃಷಿ ಸಹಾಯಕರು	6
4.	ತೋಟಗಾರರು	1
5.	ಅರಣ್ಯ ರಕ್ಷಕರು	3
6.	ಅರಣ್ಯ ಪಾಲಕರು	1
	ಒಟ್ಟು	13

ಇವರುಗಳು ಜಿಲ್ಲೆಯ ಉಪ ವಿಭಾಗೀಯ ಮಟ್ಟದ ಘಟಕ ಮುಖ್ಯಸ್ಥರುಗಳಾದ ಸಹಾಯಕ ಕೃಷಿ ನಿರ್ದೇಶಕರು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು ಸಹಾಯಕ ತೋಟಗಾರಿಕಾ ನಿರ್ದೇಶಕರು ಇವರ ಆಡಳಿತ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ತಾಲ್ಲೂಕು ಮಟ್ಟದಲ್ಲಿ ಇವರುಗಳು ಕೃಷಿ ಅಧಿಕಾರಿಗಳ ನೇತೃತ್ವದ ತಂಡದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರುಗಳು